# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 189-ಹೊಂಗಸಂದ್ರ,
## ವಾರ್ಡ್ ಸಮಿತಿ ಸಭೆಯ ನಡವಳಿಗಳು

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಕಾರ್ಯಪಾಲಕ ಅಭಿಯಂತರರು (ಪಿ.ಡಬ್ಲ್ಯೂ.ಡಿ) ರವರು ದಿನಾಂಕ: 08.10.2021 ರಂದು ಸಂಜೆ 03:30 ಘಂಟೆಗೆ ವಾರ್ಡ್ ಸಮಿತಿ ಸಭೆಯನ್ನು 189-ಹೊಂಗಸಂದ್ರ ವಾರ್ಡಿನ ಡಾ|| ಬಿ.ಆರ್ ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆಸಿದ, ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಉಪಸ್ಥಿತರು :**

**ಹಾಜರಿದ್ದ ಅಧ್ಯಕ್ಷರು / ನೋಡಲ್ ಅಧಿಕಾರಿ, ಸಹಾಯಕ ಅಭಿಯಂತರರು/ ಕಾರ್ಯದರ್ಶಿ, ಸದ್ಯಸರುಗಳು, ಹಾಜರಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು**

| ಕ್ರ.ಸಂ | ಹೆಸರು | ಹುದ್ದೆ |
|---|---|---|
| 1 | ಶ್ರೀಮತಿ ಮಾಲತಿ. ಆರ್ | ಅಧ್ಯಕ್ಷರು/ನೋಡಲ್ ಅಧಿಕಾರಿಗಳು<br>ಕಾರ್ಯಪಾಲಕ ಅಭಿಯಂತರರು<br>ಬೃಹತ್ ನೀರುಗಾಲುವೆ ವಿಭಾಗ |
| 2 | ಶ್ರೀ ಕೆ.ಎಸ್. ರಾಮೇಗೌಡ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು<br>ವಾರ್ಡ್ ಸಂ. 189 |
| 3 | ಶ್ರೀ ಎಂ ಮುನಿರಾಜು | ಸದಸ್ಯರು |
| 4 | ಶ್ರೀ ಕೋದಂಡ ರಾಮ ರೆಡ್ಡಿ | ಸದಸ್ಯರು |
| 5 | ಶ್ರೀ ಡಿ.ಎಸ್.ಕುಲಕರ್ಣಿ | ಸದಸ್ಯರು |
| 6 | ಶ್ರೀ ಡಾ|| ಕೃಷ್ಣಪ್ಪ | ವೈದ್ಯರು (ಪ್ರ.ಆ.ಕೇ) |
| 7 | ಶ್ರೀ ನಾಗರಾಜ.ಎ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 8 | ಡಾ|| ಮೊಹಮ್ಮದ್ ಅಬ್ಬಾಸ್, | ಪಶುಸಂಗೋಪನೆ ಇಲಾಖೆ. (ಬೊ ಪ) |
| 9 | ಶ್ರೀ ವೆಂಕಟೇಶ್ | ಹಿರಿಯ ಆರೋಗ್ಯ ಪರೀವಿಕ್ಷಕರು |
| 10 | ಶ್ರೀ ಹೆಚ್.ಆರ್ ಹರೀಶ್ | ಅರಣ್ಯ ವಲಯ ಅಧಿಕಾರಿ (ಬೊ.ಪ) |
| 11 | ಶ್ರೀ ಸಂತೋಷ ಪ್ರಸಾದ್.ಎಮ್ | ಸಹಾಯಕ ಅಭಿಯಂತರರು,ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 12 | ಶ್ರೀ ರಮೇಶ್.ಡಿ | ಸಹಾಯಕ ಅಭಿಯಂತರರು. (ವಿದ್ಯುತ್ ಬಿಬಿಎಂಪಿ) |
| 13 | ಶ್ರೀ ರಾಮಕೃಷ್ಣ.ಆರ್ | ಕಂದಾಯ ನಿರೀಕ್ಷಕರು, ಹೊಂಗಸಂದ್ರ |

ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರುಗಳ ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿರುತ್ತದೆ. ವಿವಿಧ ಇಲಾಖೆಯ ಅಧಿಕಾರಿ/ಸಿಬ್ಬಂದಿ ವರ್ಗದವರು ಸಭೆಗೆ ಗೈರು ಹಾಜರಾಗಿರುವ ಬಗ್ಗೆ ಅಧ್ಯಕ್ಷರು ಮತ್ತು ಸದಸ್ಯರು ಆಕ್ಷೇಪಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

- **ಆರೋಗ್ಯ ಇಲಾಖೆ (ಕೋವಿಡ್-19):**

   1. ಶ್ರೀ ಡಾ|| ಕೃಷ್ಣಪ್ಪ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಲಸಿಕೆ ನೀಡಿರುವ ಬಗ್ಗೆ ದಿನಾಂಕ: 04.09.2021 ರಿಂದ 08.10.2021 ರವರೆಗೆ
      ಒಟ್ಟು 9513 ಕೋವಿಡ್ ಪರೀಕ್ಷೆ ಮಾಡಲಾಗಿದ್ದು
      ಒಟ್ಟು 14 ಕೋವಿಡ್ ಪ್ರಕರಣಗಳು ವರದಿಯಾಗಿರುವುದಾಗಿ ಸಭೆಗೆ ತಿಳಿಸಿದ್ದರು
      18 ರಿಂದ 44 ಮತ್ತು 45 ವರ್ಷ ಮೇಲ್ಪಟವರಿಗೆ
      ಒಟ್ಟು 4794 1st dose
      ಒಟ್ಟು 11836 2nd dose
      ಲಸಿಕೆಯನ್ನು ನೀಡಲಾಗಿದೆ ಎಂದು ಶ್ರೀ ಡಾ|| ಕೃಷ್ಣಪ್ಪ ವೈದ್ಯರು ಸಭೆಗೆ ತಿಳಿಸಿದರು.

ಮು.ತಿ.ನೋ

Scanned with

- **ಘನತ್ಯಾಜ್ಯ:**

1. ಪ್ರತಿಯೊಂದು ಬೀದಿಯಲ್ಲಿ ಸೊಳ್ಳೆ ಉತ್ಪತ್ತಿಯಾಗದಂತೆ ಬಿ.ಬಿ.ಎಂ.ಪಿ ವತಿಯಿಂದ Fogging ಮಾಡಿಸಬೇಕು ಮತ್ತು ಪ್ರತಿ ದಿನ ಬೆಳಿಗ್ಗೆ ಮತ್ತು ಸಾಯಂಕಾಲ ಧೂಮೀಕರಣ ಸಿಂಪಡಿಸುವಿಕೆ ಮಾಡಬೇಕು ಎಂದು ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ತಿಳಿಸಿದರು. ಈ ಬಗ್ಗೆ ಹಿರಿಯ ಆರೋಗ್ಯ ಪರೀವಿಕ್ಷಕರು ಸಿಂಪಡಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಖಾಲಿ ನಿವೇಶನಗಳಲ್ಲಿ ಕಸ ತುಂಬಿದ್ದು, ಸ್ವಚ್ಛತೆ ಮಾಡಲು ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ತಿಳಿಸಿದರು, ಈ ಬಗ್ಗೆ ಹಿರಿಯ ಆರೋಗ್ಯ ಪರೀವಿಕ್ಷಕರಿಗೆ ಸ್ವಚ್ಛತೆ ಮಾಡಿಸಲಾಗುವುದೆಂದು ಸಭೆಗೆ ತಿಳಿಸಿದರು.

- <u>ಪಶುಸಂಗೋಪನೆ :-</u>

1. ವಾರ್ಡ್ ವ್ಯಾಪ್ತಿಯ ಅದರ್ಶ್ ಬಡಾವಣೆ ಮತ್ತು ಸುತ್ತಮುತ್ತಲಿನ ಬಡಾವಣೆಯಲ್ಲಿ ಬೀದಿ ನಾಯಿಗಳು ಹೆಚ್ಚಾಗಿದ್ದು, ನಾಯಿಗಳು ಮರಿಗಳನ್ನು ಹಾಕುತ್ತಿದ್ದು, ಹಾಗೂ ದ್ವಿಚಕ್ರ ವಾಹನವನ್ನು ಹಿಂಬಾಲಿಸುತ್ತಿದ್ದು ಹಿರಿಯ ನಾಗರೀಕರಿಗೆ, ಮಹಿಳೆಯರಿಗೆ, ಮಕ್ಕಳಿಗೆ ಕಚ್ಚುವ ಸಾಧ್ಯತೆಗಳಿರುತ್ತದೆ, ಆದುದರಿಂದ ನಾಯಿಗಳಿಗೆ ಸಂತಾನಹರಣ ಶಸ್ತ್ರ ಚಿಕಿತ್ಸೆ ಮಾಡಿಸಲು ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದಸ್ಯರು ತಿಳಿಸಿರುತ್ತಾರೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸಹಾಯಕ ನಿರ್ದೇಶಕರು ಪಶುಸಂಗೋಪನೆ ರವರು ಈ ಬಗ್ಗೆ ಆಗೊಂದು ವೇಳೆ ಕಚ್ಚುವ ನಾಯಿಯ ಛಾಯಾಚಿತ್ರ ತೆಗೆದು ಪ್ರತ್ಯೇಕವಾಗಿ ದೂರು ನೀಡಿದ್ದರೆ ಸ್ಥಳಕ್ಕೆ ಭೇಟಿ ನೀಡಿ ನಾಯಿಗಳನ್ನು ಹಿಡಿದು ಕೊಂಡು ಹೋಗಿ ಸಂತಾನಹರಣ ಶಸ್ತ್ರ ಚಿಕಿತ್ಸೆ ಆದನಂತರ ಅದೇ ಸ್ಥಳದಲ್ಲಿ ಬಿಡಲಾಗುವುದೆಂದು ಹಾಗೂ ಶಸ್ತ್ರ ಚಿಕಿತ್ಸೆ ಆದ ನಾಯಿಗಳನ್ನು ಹಿಡಿದುಕೊಂಡರೆ ಅದು ಮಾನ್ಯ ಉಚ್ಚ ನ್ಯಾಯಲಯದ ಮಾರ್ಗಸೂಚಿಗಳನ್ವಯ ನ್ಯಾಯಾಂಗ ನಿಂದನೆ ಆಗುತ್ತದೆ ಮತ್ತು ನಮ್ಮ ವಿರುದ್ಧ ದೂರು ದಾಖಲಾಗುತ್ತದೆ ಎಂದು ಸಭೆಗೆ ತಿಳಿಸಿದರು.

- **ಬೀದಿ ದೀಪ :-**

1. ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳ ನಿರ್ವಹಣೆ ಮಾಡಲು ಮತ್ತು ಹೊಸದಾಗಿ ಬೀದಿ ದೀಪವನ್ನು ಅಳವಡಿಸುವಂತೆ ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಗೆ ತಿಳಿಸಿದ್ದು, ಈ ಬಗ್ಗೆ ಸಭೆಗೆ ಹಾಜರಿದ್ದ ಶ್ರೀ ರಮೇಶ್.ಡಿ ಸಹಾಯಕ ಅಭಿಯಂತರರು ರವರು ಕ್ರಮ ವಹಿಸುವುದಾಗಿ ತಿಳಿಸಿದರು.

- **ಕಂದಾಯ:-**

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಎಷ್ಟು ಕಂದಯ ವಸೂಲಾತಿಯಾಗಿರುತ್ತದೆ ಎಂದು ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ರಾಮಕೃಷ್ಣ. ಆರ್ ಕಂದಾಯ ನಿರೀಕ್ಷಕರು, ಹೊಂಗಸಂದ್ರ ರವರು ಒಟ್ಟಾರೆಯಾಗಿ 2020-21 ಸಾಲಿನಲ್ಲಿ

| | | | | | | | |
|---|---|---|---|---|---|---|---|
| Demand | - | 16.46 Lakhs | Collection | - | 16.46 Lakhs | Outstanding - | 5.99 Lakhs |
| Arrears | - | 6.16 Lakhs | Arrears | - | 1.97 Lakhs | Arrears - | 3.76 Lakhs |
| Current year - | | 10.60 Lakhs | Current year - | | 7.29 Lakhs | Current year - | 2.23 Lakhs |

ಮು.ತಿ.ನೋ



Scanned with

- <u>ಬಿ.ಡಬ್ಲ್ಯೂ.ಎಸ್.ಎಸ್.ಬಿ.</u>

1. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ 7ನೇ ಅಡ್ಡ ರಸ್ತೆ ಯಿಂದ 1ನೇ ಮುಖ್ಯ ರಸ್ತೆ ರಾಜಕಾಲುವೆ ರವರಿಗೆ ಕಾಮಗಾರಿ ಕೈಗೊಂಡಿದ್ದು ಇಲ್ಲಿಯವರಿಗೆ ಕಾಮಗಾರಿಯನ್ನು ಕಾರ್ಯನಿರ್ವಹಣೆ ಮಾಡಿರುವುದಿಲ್ಲವೆಂದು ಶೀಘ್ರದಲ್ಲಿ ಪ್ರಾರಂಭಿಸಲು ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು.
2. ಹೊಂಗಸಂದ್ರ ವಾರ್ಡ್ ವ್ಯಾಪ್ತಿಯ ಬೇಗೂರು ಮುಖ್ಯ ರಸ್ತೆಯಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು ವೆಟ್ ಮಿಕ್ಸ್ ಹಾಕಲು ಹೊಂಗಸಂದ್ರ ಶ್ರೀ ಕೋದಂಡ ರಾಮರೆಡ್ಡಿ, ಶ್ರೀ ಎಂ ಮುನಿರಾಜು ಸದ್ಯಸರು ರವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ಸಹಾಯಕ ಕಾರ್ಯಪಾಲಕ ಅಭಿಯಂತರರ, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮವಹಿಸುವುದಾಗಿ ಸಭೆಗೆ ತಿಳಿಸಿದರು.

ಮೇಲಿನ ಎಲ್ಲಾ ವಿಷಯಗಳಿಗೆ ಸಂಬಂಧಪಟ್ಟಂತೆ ಕೂಲಂಕುಷವಾಗಿ ಚರ್ಚಿಸಿ, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿ, ಸಭೆಯನ್ನು ವಂದಾನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

8/10/2021

ಕಾರ್ಯದರ್ಶಿ ವಾರ್ಡ್ ಸಂಖ್ಯೆ: 189ರ
ಸಹಾಯಕ ಅಭಿಯಂತರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

8/10/21

ಅಧ್ಯಕ್ಷರು/ ನೋಡಲ್ ಅಧಿಕಾರಿ
ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1. ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ತರಲು ಅಪ್ತ ಶಾಖೆಗೆ ಸಲ್ಲಿಸಿದೆ.
6. ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7. ಕಛೇರಿ ಪ್ರತಿ.

Scanned with